# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 16 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿದ್ಯುತ್ ಉತ್ಪಾದನೆಯಲ್ಲಿ ತಮ್ಮ ರಾಜ್ಯವು ಸ್ವಾವಲಂಬಿಯಾಗಿದ್ದರೂ ಸಹ ಇತರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಗ್ರಾಹಕರಿಗೆ ವಿಧಿಸುತ್ತಿರುವ ವಿದ್ಯುತ್ ದರಗಳು ಬಹಳ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿದ್ಯುತ್ ದರವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:<br>1. ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉಷ್ಣಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್‌ನ್ನು ಖರೀದಿಸಬೇಕಾಗಿರುವುದರಿಂದ ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಜಕಾತಿ ಹೆಚ್ಚಳವು ಅನಿವಾರ್ಯವಾಗಿದೆ.<br>2. ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉಷ್ಣಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ.<br>3. ಇದಲ್ಲದೆ, ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.<br>4. ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದ್ದು, ವಿದ್ಯುತ್ ದರ ಏರಿಕೆಯು ಅನಿವಾರ್ಯವಾಗಿರುತ್ತದೆ.<br>ದರ ನಿಗದಿಪಡಿಸುವ ಅಧಿಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.</td></tr>
<tr><td>ಆ)</td><td>ರಾಜ್ಯ ಸರ್ಕಾರವು ಪ್ರತಿ ಯೂನಿಟ್ ವಿದ್ಯುತ್ತನ್ನು ಯಾವ ದರದಲ್ಲಿ ಖರೀದಿಸುತ್ತಿದೆ ಮತ್ತು ಯಾವ ದರದಲ್ಲಿ ಗ್ರಾಹಕರಿಗೆ ಮಾರಾಟ ಮಾಡುತ್ತಿದೆ; (ವಿವರ ನೀಡುವುದು)</td><td>2022-23 ನೇ ಸಾಲಿನ (ಜುಲೈ-2022ರ ಅಂತ್ಯಕ್ಕೆ) (ತಾತ್ಕಾಲಿಕ) ವಿದ್ಯುತ್ ಸರಬರಾಜು ಕಂಪನಿವಾರು ಪ್ರತಿ ಯೂನಿಟ್‌ನ ಸರಸಾರಿ ವಿದ್ಯುತ್ ಖರೀದಿ ಹಾಗೂ ಗ್ರಾಹಕರಿಗೆ ಮಾರಾಟ ಮಾಡಲಾದ ವಿದ್ಯುತ್ ದರದ ವಿವರಗಳು ಕೆಳಕಂಡಂತಿವೆ.<br>
<table>
<tr><th>ಕಂಪನಿ</th><th>ಸರಾಸರಿ ವಿದ್ಯುತ್ ಖರೀದಿ ದರ ಪ್ರತಿ ಯೂನಿಟ್‌ಗೆ (ರೂಗಳಲ್ಲಿ)</th><th>ಸರಾಸರಿ ವಿದ್ಯುತ್ ಮಾರಾಟ ದರ ಪ್ರತಿ ಯೂನಿಟ್ ಗೆ (ರೂಗಳಲ್ಲಿ)</th></tr>
<tr><td>ಬೆಸ್ಕಾಂ</td><td>6.09</td><td>8.87</td></tr>
<tr><td>ಸೆಸ್ಕ್</td><td>4.82</td><td>7.51</td></tr>
<tr><td>ಮೆಸ್ಕಾಂ</td><td>4.48</td><td>8.12</td></tr>
<tr><td>ಹೆಸ್ಕಾಂ</td><td>5.19</td><td>8.31</td></tr>
<tr><td>ಜೆಸ್ಕಾಂ</td><td>5.47</td><td>7.73</td></tr>
</table></td></tr>
</table>

| | | |
|---|---|---|
| ಇ) | ನಮ್ಮ ರಾಜ್ಯದಿಂದ ಇತರೆ ರಾಜ್ಯಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ; ಮಾಡುತ್ತಿದ್ದಲ್ಲಿ ಪ್ರತಿ ಯೂನಿಟ್ ವಿದ್ಯುತ್ತನ್ನು ಯಾವ ದರಕ್ಕೆ ಮಾರಾಟ ಮಾಡಲಾಗುತ್ತಿದೆ? (ವಿವರ ನೀಡುವುದು) | Deep Portal ಇದರಲ್ಲಿ ಹಿಮಾಚಲ ಪ್ರದೇಶ ರಾಜ್ಯಕ್ಕೆ PTC Trader ಮುಖಾಂತರ ಅಕ್ಟೋಬರ್ – 2021 ರಿಂದ ಮಾರ್ಚ್ 2022 ರ ಅಂತ್ಯಕ್ಕೆ 132.12 Million units ವಿದ್ಯುಚ್ಛಕ್ತಿಯನ್ನು ಸರಾಸರಿ ದರ ಪ್ರತಿ ಯೂನಿಟ್‌ಗೆ ರೂ.4.51/- ರಂತೆ ಒಟ್ಟು ರೂ.59.55 ಕೋಟಿಗೆ ಮಾರಾಟ ಮಾಡಲಾಗಿರುತ್ತದೆ.<br><br>**ಮುಂದುವರೆದು, ವಿದ್ಯುತ್ ವಿನಿಮಯ ಕೇಂದ್ರಗಳಾದ** (IEX) ಮತ್ತು Power Exchange of India Limited (PXIL) ಮೂಲಕ ಮಾರಾಟ ಮಾಡಿರುವ ವಿದ್ಯುತ್ತಿನ ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಸಂಖ್ಯೆ: ಎನರ್ಜಿ 188 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 16 ಕ್ಕೆ ಅನುಬಂಧ

ಪವರ್ ಎಕ್ಸ್‌ಛೇಂಜ್ ಮುಖಾಂತರ ಮಾಡಲಾದ ವಿದ್ಯುತ್ ಮಾರಾಟ ಮತ್ತು ಖರೀದಿಯ ವಿವರ:

| ( 2021-22 ) | | | |
|---|---|---|---|
| ಕಂಪನಿ ಹೆಸರು | ವಿದ್ಯುತ್ ಪ್ರಮಾಣ (ಮಿಲಿಯನ್ ಯುನಿಟ್) | ಮೊತ್ತ (ಕೋಟಿಗಳಲ್ಲಿ) ಒಪನ್ ಆಕ್ಸೆಸ್‌ನ್ನು ಒಳಗೊಂಡಿದೆ | ಸರಾಸರಿ ದರ ಪ್ರತಿಯೂನಿಟ್‌ಗೆ (ರೂ.ಗಳಲ್ಲಿ) |
| ಅಲ್ಪಾವಧಿ ಅಡಿಯಲ್ಲಿ ವಿದ್ಯುತ್ ಮಾರಾಟ | | | |
| ಇಂಡಿಯನ್ ಎನರ್ಜಿ ಎಕ್ಸಚೇಂಜ್ (ಐಇಎಕ್ಸ್ ಮತ್ತು ಪಿ.ಎಕ್ಸ್‌ಐ.ಎಲ್ ಮುಖಾಂತರ) | 6577.56 | 2837.10 | 4.31 |
| ನಿವ್ವಳ ಖರೀದಿ | 502.64 | 208.11 | 4.12 |
| ಒಟ್ಟು ಮಾರಾಟ | 6074.92 | 2628.99 | 4.33 |